ಲಕಲಕಿಸುತ್ತಿದ್ದ ನನ್ನ ಬೈಸಿಕಲ್ಲು ಹಂಪಿಯ ಉತ್ಖನನದಲ್ಲಿ ಸಿಕ್ಕ ಪುರಾತನ ವಸ್ತುವಿನಂತೆ ಕಾಣತೊಡಗಿತು. ಹೆಂಡತಿಗಂತೂ ಅದು ದಿವಾನಖಾನೆಯಲ್ಲಿ ನಿಂತು ಸಗಣಿ ಹಾಕುತ್ತಿರುವ ಗೊಡ್ಡೆಮ್ಮೆಯಂತೆ ಕಿರಿಕಿರಿಯಾಗಿತ್ತು. ತುಟಿಯಲ್ಲಿ ಮಾತ್ರ ಪ್ರಕಟವಾಗುವ ನನ್ನ ವರ್ಗಪ್ರಜ್ಞೆಯನ್ನು ಪರೀಕ್ಷೆಗೊಡ್ಡುವಂತೆ, ಬಾನು ಅದನ್ನು ಹೊರಹಾಕಲು ಒಂದು ಮಸಲತ್ತು ಹೂಡಿದಳು. ಹೈಸ್ಕೂಲು ಪಾಸಾಗಿ ಕಾಲೇಜಿನ ಮೆಟ್ಟಿಲು ಹತ್ತಲು ತಯಾರಾಗಿದ್ದ ಯಮುನಮ್ಮನ ಸುಪುತ್ರನ ಮೂಲಕ ಒಂದು ಅರ್ಜಿ ಗುಜರಾಯಿಸಿದಳು. ದ್ವಿಚಕ್ರಿಯನ್ನು ಬೇಡಿ ಬಂದ ಅರ್ಜಿದಾರನ ಮುಖನೋಡಿದೆ. ಹದಿಹರೆಯದ ಪೋರ. ದನಿಯೊಡೆದು ಮೇಲ್ತುಟಿಯ ಮೇಲೆ ಸಣ್ಣಗೆ ಮೀಸೆ ಚಿಗುರುತ್ತ ನನ್ನ ತಾರುಣ್ಯವನ್ನೇ ನೆನಪಿಸುವಂತಿದ್ದ. ರಾಜನೊಡ್ಡಿದ ಪರೀಕ್ಷೆಯಲ್ಲಿ ಗೆದ್ದು ಅರ್ಧರಾಜ್ಯದ ಪಾಲುಕೇಳಲು ಬಂದ ಅದೃಷ್ಟಶಾಲಿ ದಾರಿಹೋಕನಂತೆ ಅವನ ಕಣ್ಣು ಥಳಥಳಿಸುತ್ತಿದ್ದವು. ಸೈಕಲ್ಲು, ಫೈಸಲಾಗದ ಕೇಸಿನಲ್ಲಿ ಸಿಕ್ಕಿಬಿದ್ದು ಪೊಲೀಸ್ ಠಾಣೆಯ ಮುಂದೆ ನಿಂತ ವಾಹನವಾಗುವ ಬದಲು, ಹುಡುಗನ ಕೈಕಾಲಲ್ಲಿ ಓಡಾಡಿಕೊಂಡಿರಲಿ ಎಂದು ಅನಿಸಿತು. ಅದರತ್ತ ಕೊನೆಯ ಸಲವೆಂಬಂತೆ ಕಣ್ಣು ಹಾಯಿಸಿದೆ. ನನಗೆ ಗಾಳಿ–ಬೆಳಕು ಬೇಕು ಎಂದು ಅದು ಆರ್ತಸ್ವರ ಹೊರಡಿಸಿದಂತೆ ಭಾಸವಾಯಿತು. ಹುಡುಗನಿಗೆ ಮನಸಾರೆ ಧಾರೆಯೆರೆದು ಕೊಟ್ಟೆ. ಆತ ಅದನ್ನು ನಖಶಿಖಾಂತ ತೊಳೆದು ಚೊಕ್ಕಗೊಳಿಸಿ, ಚಕ್ರಕ್ಕೆ ಹವಾ ತುಂಬಿಸಿ, ಚಾಲನೆ ಮಾಡುತ್ತ ಬೀದಿಯ ತಿರುವಿನಲ್ಲಿ ಮರೆಯಾದನು. ಸವಾರನಿಲ್ಲದ ಕುದುರೆಯಂತೆ ನಿಂತಿದ್ದ ಸೈಕಲ್ಲು, ಕಿಂದರಜೋಗಿಯ ಹಿಂದೆ ಖುಶಿಯಿಂದ ಹೋದ ಬೊಮ್ಮನಹಳ್ಳಿಯ ಬಾಲಕರ ಹಾಗೆ ಕಣ್ಮರೆಯಾಯಿತು. ಮತ್ತೆಂದೂ ವಾಪಸಾಗಲಿಲ್ಲ. ಹಾಸುಂಡು ಬೀಸಿ ಒಗೆಯುವ ಮನೆಗೆ ಹೇಗೆತಾನೇ ಮರಳೀತು?

ನೆನಪಿನ ಸುರುಳಿ ಬಿಚ್ಚುತ್ತಿದೆ. ಮದುವೆಯಾದ ಮೊದಲ ದಿನಗಳಲ್ಲಿ, ನಮ್ಮೊಳಗೆ ನಡೆಯುತ್ತಿದ್ದ ಬಿರುಸು ಕಲಹಗಳನ್ನು ನಿವಾರಿಸಿ ಮಧುರಮಿಲನಕ್ಕೆ ಪೀಠಿಕೆ ಹಾಕುವ ಅಭಿಸಾರಿಕೆಯಾಗಿತ್ತು ಬೈಸಿಕಲ್. ಸ್ಕೂಟರು ಕಾರುಗಳಲ್ಲಿ ನೂರಾರು ಪ್ರೇಮಿಗಳು, ದಂಪತಿಗಳು ಅಡ್ಡಾಡುವರು. ಆದರೆ ತೈಲಚಾಲಿತ ವಾಹನಗಳು ಸವಾರರ ಆರ್ಥಿಕ ಶಕ್ತಿಯ ತೋರಿಸುತ್ತವೆಯೇ ಹೊರತು ನಿಜ ಸಾಮರ್ಥ್ಯವನ್ನಲ್ಲ. ಎಕ್ಸಿಲೇಟರ್ ಒತ್ತಿ ವೇಗವಾಗಿ ಓಡಿಸುವುದೆಂತಹ ಮಹಾಕಾರ್ಯ? ಅಲ್ಲಿ ಯಶಸ್ಸಿದ್ದರೆ ಅದು ಸಲ್ಲಬೇಕಾದ್ದು ಎಂಜಿನಿಗೆ ಇಲ್ಲವೇ ರಸ್ತೆಗೆ. ಸವಾರರ ಕಸುವಿನ ಖರೇಖರೇ ಒರೆಗಲ್ಲೆಂದರೆ ಸೈಕಲ್ಲು. ನಾನು ಸೆಕೆಂಡ್‌ಶೋ ಸಿನಿಮಾ ನೋಡಿಕೊಂಡು, ಹೆಂಡತಿ ಮಕ್ಕಳನ್ನು ಕೂರಿಸಿಕೊಂಡು ಕಚ್ಚಾರಸ್ತೆಯಲ್ಲಿ ಗಾಢ ಕತ್ತಲಲ್ಲಿ ಮನೆಗೆ ಬಂದ ಸನ್ನಿವೇಶ ನೆನಪಾಗುತ್ತಿದೆ. ಆ ದೃಶ್ಯವನ್ನು ಯಾರಾದರೂ ನೋಡಿದ್ದರೆ ನಮ್ಮನ್ನು ಹಿಡಿದು ಕೂಡಲೇ ಸರ್ಕಸ್ಸಿಗೆ ಜಮೆ ಮಾಡುತ್ತಿದ್ದರು. ಸರ್ಕಸ್ಸಿನಲ್ಲಿ ಗಟ್ಟಿಮುಟ್ಟಾದ ಹೆಣ್ಣು ಮಡ್‌ಗಾರ್ಡು, ಬ್ರೇಕು ಇಲ್ಲದ ಸೈಕಲನ್ನು ವೃತ್ತಾಕಾರವಾಗಿ ಸುತ್ತಿಸುತ್ತ ಎಂಟು–ಹತ್ತು ಜನರನ್ನು ಹತ್ತಿಸಿಕೊಳ್ಳುವ ದೃಶ್ಯವನ್ನು ನೋಡದವರು ಯಾರು?

ಈಗಲೂ ಕಟ್ಟೆದಬುತ್ತಿ ಹಿಡಿದು ಸೀರೆ ಸಂಭಾಳಿಸಿಕೊಂಡು ಕಂಬಿಯ ಮೇಲೆ ಕುಳಿತ ಮಡದಿಯನ್ನು ಪೆಡಲಿನ ಶ್ರುತಿಯೊಂದಿಗೆ ಪ್ರಿಯವಾಗಿ ಮಾತಾಡುತ್ತ, ದುಡಿಮೆಯ ತಾಣಕ್ಕೆ ಹೋಗುವ ಸವಾರರ ಚಿತ್ರ ಇಷ್ಟವಾಗುತ್ತದೆ; ಮಕ್ಕಳನ್ನು ಕೂರಿಸಿಕೊಂಡು ಶಾಲೆಗೆ ಬಿಟ್ಟುಹೋಗುವ ಪೋಷಕರ ನೆನಪಾಗುತ್ತದೆ. ಸ್ಕೂಟರುಬೈಕುಗಳ ಹಿಂಬದಿ 'ತುಂಟಹುಡುಗನ ಸೊಂಟಾಸುತ್ತಿ' ಬೆನ್ನಮೇಲೆ ತಲೆಯಾಣಿಸಿ ಕೂರುವ ಹತ್ತಾರು ವಿನ್ಯಾಸದ ಬೈಕುಗಳು